ಮಾಡದೆ ಸುಮ್ಮನಿರಬೇಕಾಗಿತ್ತು ಅಷ್ಟೇ... ಇದರಿಂದಾಗಿ ಮೊದಲು ಒಂದ್ಹತ್ತು ಜನ, ಎರಡನೇ ದಿನ ಇನ್ನೊಂದಿಪ್ಪತ್ತು ಜನ, ಮೂರನೇ ದಿನ ಇನ್ನೊಂದೈವತ್ತು ಜನ ಹೀಗೆ ಕಡಿಮೆಯಾಗುತ್ತಾ ಬಂದರು. ಮುಂಚೂಣಿಯ ಚಳವಳಿ ನಿರತರು, ಅವರಿಗೂ ಪಾಪ ಬೇಜಾರಾಗಿರುತ್ತೆ, ಅವರವರ ಕೆಲಸಕ್ಕೆ ಹೋಗಿರುತ್ತಾರೆ, ನಾಳೆ ನಾಡಿದ್ದರಲ್ಲಿ ಬರುತ್ತಾರೆ ಎಂದುಕೊಂಡು ತಮ್ಮ ಪಾಡಿಗೆ ತಾವು ಚಳವಳಿಯನ್ನು ಮುಂದುವರೆಸುತ್ತಲೇ ಇದ್ದರು. ಕೇಂದ್ರ ಸರ್ಕಾರದ ವಿರುದ್ಧ, ರಾಜ್ಯ ಸರ್ಕಾರದ ವಿರುದ್ಧ, ಸ್ಥಳೀಯ ಎಂ.ಎಲ್.ಎ. ವಿರುದ್ಧವೂ ಘೋಷಣೆಗಳನ್ನು ಕೂಗುತ್ತಿದ್ದವರಿಗೆ, ಕೂಗಲು ಬೇಕಾದ ಜನರೇ ಇಲ್ಲದೇ ಶಬ್ದದ ಸದ್ದೇ ಅಡಗಿಹೋಗಲಾರಂಭಿಸಿತು.

ಹೀಗೇ ಮುಂದುವರೆಯುತ್ತಿರಬೇಕಾದರೆ ಒಂದು ಭಾನುವಾರ, ವಕ್ಕರಿಸುತ್ತಿರುವ ಮಹಾಮಾರಿ ಕೋವಿಡ್ ಅನ್ನು ದೂರೀಕರಿಸಲು ಇಡೀ ದೇಶಕ್ಕೆ ದೇಶವೇ ಲಾಕ್‌ಡೌನನ್ನು ಆಚರಿಸಬೇಕೆಂದು ದೇಶದ ಪ್ರಧಾನಿಯೇ ಘೋಷಿಸಿಬಿಟ್ಟರು. ಲಾಕ್‌ಡೌನ್ ಅಂದರೆ, ಹಿಂದೆ ವಿರೋಧ ಪಕ್ಷಗಳು ಕರೆಕೊಡುತ್ತಿದ್ದ ಭಾರತ್ ಬಂದ್‌ನಂತೆ, ಇಡೀ ದೇಶದ ಎಲ್ಲ ವ್ಯವಹಾರಗಳು ಮಾತ್ರವಲ್ಲ, ಜನರ ಓಡಾಟವನ್ನೂ ಸರ್ಕಾರವೇ ನಿರ್ಬಂಧಿಸುವುದಾಗಿತ್ತು. 'ಮನೆಯಲ್ಲೇ ಇರಿ, ಆರಾಮಾಗಿರಿ' ಎಂಬ ಘೋಷವಾಕ್ಯವನ್ನು ತೇಲಿಬಿಟ್ಟರು. ಅಂದರೆ ನಾಳೆ ಏನು ಮಾಡಬೇಕೆಂಬ ಚರ್ಚೆ ಚಳವಳಿ ನಿರತರಾಗಿದ್ದವರಿಗೆ ಕಾಡಿತು. ನಾಳೆ ಬಿಟ್ಟು ನಾಡಿದ್ದು, ಮತ್ತೆ ಒಗ್ಗೂಡುವುದೆಂದು ನಿರ್ಧರಿಸಿ ಹಿಂದಿನ ಸಂಜೆಯೇ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಟೆಂಟ್ ಹಾಕಿದ್ದ ಶಾಮಿಯಾನ, ಬ್ಯಾನರ್‌ಗಳನ್ನು ಎಲ್ಲೆಲ್ಲಿದ್ದವೋ ಅಲ್ಲಲ್ಲೇ ಬಿಟ್ಟು ತೆರಳಿದರು. ಅವರೇ ಹೋದ ಮೇಲೆ ತಮಗಿನ್ನೇನು ಕೆಲಸ ಎಂದು ತೂಕಡಿಸುತ್ತಿದ್ದ ಪೊಲೀಸರೂ ತಮ್ಮ ತಮ್ಮ ಮನೆಗಳತ್ತ ತೆರಳಿದರು.

ಇಡೀ ದಿನ ಮನೆಯಲ್ಲಿರುವುದು ಹೇಗೆಂದು ಕಲಿಸುವುದಕ್ಕೆ ಇದೊಂದು ಪ್ರಾಯೋಗಿಕ ಪರೀಕ್ಷೆ. ಎಲ್ಲರೂ ಒಂದು ದಿನ ಎಲ್ಲೆಲ್ಲೂ ಚಲಿಸದೇ, ಬಾಗಿಲಿನಿಂದ ಆಚೆಯೂ ಬರದೆ, ಬೀದಿಗೂ ಇಳಿಯದೇ ಇರುವಂಥ ಒಂದು ಪ್ರಯೋಗ. ಮುಂದೆ ಇಂಥ ದಿನಗಳು ತಿಂಗಳುಗಟ್ಟಲೇ ಬರುವವೆಂಬುದರ ಅರಿವು ಆಗ ಯಾರಿಗೂ ಇರಲಿಲ್ಲ.

ಸೋಮವಾರ ನನ್ನ ಅಡಿಯಲ್ಲಿ ನಡೆಯುತ್ತಿದ್ದ ನನ್ನನ್ನು ಉಳಿಸುವ ಚಳವಳಿಗೆ ಮತ್ತೆ ಎಲ್ಲರೂ ಒಂದಾಗಿ ಬಂದು ಸೇರುವ ವೇಳೆಗೆ ಆಗಲೇ ಹನ್ನೆರಡು ಗಂಟೆಯಾಗಿ ಹೋಗಿತ್ತು. ಹಿರಿಯ ಲೇಖಕ ಯಮುನಪ್ಪ, ಸ್ವಾತಂತ್ರ್ಯ ಹೋರಾಟಗಾರ ಮುದ್ದುವೀರಪ್ಪ ಬಿಟ್ಟರೆ ಮತ್ಯಾವ ಮುಖಂಡರೂ ಬರಲಿಲ್ಲ. ಲಾಕ್‌ಡೌನ್ ಮುಗಿಯುವ ವೇಳೆಗಾಗಲೇ ಬಾಬು, ಮಹೇಶ ಮುಂತಾದವರು ಲಕ್ಷಗಟ್ಟಲೆಗೆ ಮಾರಾಟವಾಗಿಬಿಟ್ಟಿದ್ದರು. ಮಂಜುನಾಥಾನಂದ ಸ್ವಾಮೀಜಿಗಳು ತಮ್ಮ ಬಿಡುವಿರದ ಚಟುವಟಿಕೆಗಳ ಮಧ್ಯೆ ಈ ವಿಷಯ ತಮ್ಮ ಕಿವಿಗೇ ಬಿದ್ದಿಲ್ಲವೆಂಬಂತೆ ಜಾಣಕಿವುಡರಾಗಿದ್ದರು. ಇನ್ನು ನೃಪತುಂಗ, ಪೂರ್ವನಿರ್ಧರಿತ ಕಾಲ್‌ಶೀಟ್‌ನಂತೆ ಶೂಟಿಂಗ್‌ಗೆಂದು ಊಟಿಗೆ ಹೋಗಿದ್ದವನಿಗೆ ಬರುವುದಕ್ಕೇ ಸಾಧ್ಯವಾಗಿರಲಿಲ್ಲ.

ಮರುದಿನ ಆಗಲೇ ವಿದೇಶದಿಂದ ಬಂದಿದ್ದ ಇಂತಿಷ್ಟು ಜನರಲ್ಲಿ ಕೊರೊನಾ ವೈರಸ್ ಪತ್ತೆಯಾಗಿದೆ ಎಂಬ ಭೀಕರ ಸುದ್ದಿ ಎಲ್ಲರನ್ನೂ ತಳಮಳಗೊಳಿಸಿತು. ಅದಕ್ಕೆ ಔಷಧಿಯೇ ಇಲ್ಲ ಎಂದೇ ತಾನೆ, ಸರ್ಕಾರ ಇಷ್ಟೊಂದು ಮುತುವರ್ಜಿ ವಹಿಸಿ ಲಾಕ್‌ಡೌನ್ ಅಸ್ತ್ರ ಪ್ರಯೋಗ ಮಾಡಿದ್ದು ಎಂದು ಕೇಂದ್ರ ಸರ್ಕಾರ ಮತ್ತೆ ಮತ್ತೆ ಪ್ರತಿಪಾದಿಸುತ್ತಲೇ ಇತ್ತು. ಆದರೂ ಹೇಗೆಲ್ಲ ವೈರಸ್ ಹರಡುತ್ತಿದೆ ನೋಡಿ, ಹೀಗೇ ಆದರೆ ಹಿಂದೆ ಪ್ಲೇಗ್ ಎಂಬ ಮಹಾಮಾರಿ ಬಂದು, ಇಲಿಗಳು ಪತರುಗುಟ್ಟಿ ಬೀಳುತ್ತಿದ್ದಂತೆಯೇ ಮನುಷ್ಯರೂ ಬಗಲಲ್ಲಿ ಗಂಟಾಗಿ ಉದುರುದುರಿ ಬಿದ್ದು ಸತ್ತುಹೋಗಿ ಹೇಗೆ ಊರಿಗೆ ಊರುಗಳೇ ನಿರ್ನಾಮವಾಗಿದ್ದವೋ ಹಾಗೆ ಇಡೀ ಮನುಕುಲವೇ ನಾಶವಾಗಿಬಿಡುತ್ತದೆ ಎಂಬಂಥ ಭೀಕರ ಸುದ್ದಿಯನ್ನು ಮಾಧ್ಯಮಗಳು ಪ್ರಸಾರ ಮಾಡಿದವು. ಅದಾದರೋ ನಿಧಾನಕ್ಕೆ ತನ್ನ ಕಬಂಧ ಬಾಹುಗಳನ್ನು ಚಾಚುತ್ತಿತ್ತು. ಆದರೆ ಈ ಸಾಂಕ್ರಾಮಿಕ ರೋಗ ಮನುಷ್ಯರಿಂದ ಮನುಷ್ಯರಿಗೆ ಹಬ್ಬುತ್ತಾ ತನ್ನ ಸರಪಳಿಯನ್ನು ಒಂದರಿಂದ ಹತ್ತು, ಹತ್ತರಿಂದ ನೂರು, ನೂರರಿಂದ ಸಾವಿರ ಹೀಗೆ ಕೆಲವೇ ದಿನಗಳಲ್ಲಿ ಅವರ ಅರಿವಿಗೇ ಬಾರದಂತೆ ಇಡೀ ಮನುಕುಲಕ್ಕೇ ಅಂಟಿಕೊಂಡುಬಿಡುವಂಥದಾಗಿತ್ತು.

ಇದು ಚೀನಾದಂಥ ದೇಶವು ಅಭಿವೃದ್ಧಿಪಡಿಸಿದ ಮಾನವ ನಿರ್ಮಿತ ವೈರಾಣು ಎಂದೂ, ಅದು ಶಸ್ತ್ರಯುದ್ಧ, ಪರಮಾಣು ಯುದ್ಧದ ಭೀಕರತೆಗಿಂತಲೂ ಭೀಕರ ಎಂದೂ ಬಿಂಬಿಸಲಾಗುತ್ತಿತ್ತು. ಅದು ಮನುಷ್ಯನಿಗೆ ತಗುಲಿದ ಎಷ್ಟೋ ದಿನಗಳವರೆಗೆ ಅದರ ಇರವೇ ತಿಳಿಯದಂತೆ, ಅಷ್ಟರಲ್ಲಿ ಅದು ಅನೇಕ ಜನರಿಗೆ ತಗುಲಿಕೊಳ್ಳುತ್ತಿತ್ತೆಂಬ ಅದರ ನಿಗೂಢತೆಯನ್ನು ಪ್ರಚುರ ಪಡಿಸಲಾಯಿತು. ಇದೊಂದು ಪ್ರಪಂಚದ ಮೇಲೆ ಸಾರಿರುವ ಮೂರನೇ ಮಹಾಯುದ್ಧದಂತೆ, ಇದನ್ನು ಗೆಲ್ಲಬೇಕೆಂದರೆ ಜನ ಮಾಡಬೇಕಾಗಿರುವುದಿಷ್ಟೇ, ಮನೆಯಲ್ಲೇ ಇರಬೇಕು, ಜನರಿಂದ ದೂರವಿರಬೇಕು ಎಂದು ಪದೇ ಪದೇ ರೇಡಿಯೊ, ಟೀವಿಗಳಲ್ಲಿ ಬಿತ್ತರಿಸಲಾಯಿತು. ಸುದ್ದಿ ಮಾಧ್ಯಮಗಳಂತೂ ಹಗಲೂ ರಾತ್ರಿ ರುಚಿ ಕಳೆದುಕೊಂಡ ಚ್ಯೂಯಿಂಗ್ ಗಮ್‌ನಂತೆ ಜಗಿದೂ ಜಗಿದೂ ಬಲೂನ್‌ನಂತೆ ಊದೀ ಊದಿ ಖುಷಿಪಟ್ಟುಕೊಂಡವು.

ಅದಕ್ಕೆ ತಕ್ಕನಾಗಿ ಅಂದು ಸಂಜೆಯೇ ಪ್ರಧಾನಮಂತ್ರಿ ದೇಶವನ್ನು ಉದ್ದೇಶಿಸಿ ಮಾತನಾಡುತ್ತಾ, 'ಎಲ್ಲಿದ್ದೀರೋ ಅಲ್ಲೇ ಇದ್ದುಬಿಡಿ' ಎಂದು ಅಂದು ಮಧ್ಯರಾತ್ರಿಯಿಂದಲೇ ಯಾರ ಓಡಾಟಕ್ಕೂ ಅವಕಾಶ ನೀಡದೇ ಮೂರು ವಾರಗಳ ಕಾಲ ನಿರ್ಬಂಧ ಹೇರಿ ಕೂರಿಸಿಬಿಟ್ಟರು. ಕಾಡುಪ್ರಾಣಿಗಳಂತೆ ನಾಡ ತುಂಬ ಓಡಾಡಿಕೊಂಡಿದ್ದ ಜನ ಮಾತು ಕೇಳುವವರೇ... ಏನಾಗುತ್ತದೆ ನೋಡೋಣ ಎಂಬ ಕುತೂಹಲದಿಂದ ಅರ್ಧ ಜನ ಬೀದಿಗೆ ಬರುತ್ತಿದ್ದರು. ಭಾರತೀಯ ದಂಡ ಸಂಹಿತೆಯ ಸೆಕ್ಷನ್ನು ಹಾಕಿದರು. ಆದರೂ ಜನಗಳು ಸೇರುವುದನ್ನು ತಪ್ಪಿಸಲಾಗದಾದಾಗ ಕರ್ಫ್ಯೂ ವಿಧಿಸಿ, ರಸ್ತೆರಸ್ತೆ, ಬೀದಿಬೀದಿಗಳನ್ನು ಬಂದು ಮಾಡಿ, ರಸ್ತೆಗೆ ಇಳಿಯುವ ಜನಗಳಿಗೆಲ್ಲ ಪೊಲೀಸರು ಲಾಠಿಯನ್ನು ಬೀಸಲಾರಂಭಿಸಿದರು.

ಮೂರು ವಾರ ಎಲ್ಲ ಬಂದ್ ಎಂದರೆ ಅವತ್ತವತ್ತಿನ ಊಟಕ್ಕೆ ಏನು ಮಾಡಬೇಕು ಎಂದುಕೊಂಡವರ ದೊಡ್ಡ ಸಮುದಾಯವೇ, ಮನೆಯೊಳಗೇ ಇದ್ದರೂ ಅಕ್ಷರಶಃ ಬೀದಿಗೆ ಬಿದ್ದಂತೆ, ಊಟ ತಿಂಡಿ ಇಲ್ಲದೇ ಹಸಿವಿನಿಂದ ಕಂಗಾಲಾಗಿ ಯಾರ ಯಾರ ಮನೆಯ ಬಾಗಿಲನ್ನೋ ಬಡಿದರು. ಆದರೆ ಇವರೇ ಕೊರೊನಾ ವೈರಸ್ ಹೊತ್ತುಕೊಂಡು ಬಂದವರೆಂಬಂತೆ ಅನುಮಾನದಿಂದಲೇ ನೋಡುತ್ತ ಉಳ್ಳವರು ಯಾರೂ ಇವರತ್ತ ಮುಖಮಾಡಿ ನೋಡದೇ, ಮುಖಗವುಸು ಹಾಕಿಕೊಂಡು ತಮ್ಮ ಭಾವನೆಗಳೂ ಯಾರಿಗೂ ಕಾಣದಂತೆ ಇದ್ದುಬಿಡಲಾರಂಭಿಸಿದರು.

ಅವರದೇ ಅಂಥ ಸ್ಥಿತಿಯಾದರೆ ಇನ್ನು ನನ್ನನ್ನು ಕೇಳುವವರು ಯಾರು?

ಮಣ್ಣನ್ನು ಬಗಿಯುತ್ತಿದ್ದ ಯಂತ್ರಗಳು ಎಲ್ಲಿದ್ದವೋ ಅಲ್ಲೇ ಹಾಗೇ ನಿಂತುಬಿಟ್ಟವು. ಕೆಲಸಗಾರರು ಅವರವರ ಶೆಡ್‌ಗಳಲ್ಲೇ ಉಳಿದುಕೊಂಡುಬಿಟ್ಟಿದ್ದರು. ಹಾಗಿದ್ದ ಮೇಲೆ ನನಗಿನ್ಯಾರ ಭಯ. ನಿರಾತಂಕವಾಗಿ ಉಸಿರಾಡಲಾರಂಭಿಸಿದೆ.

ನಾನೇ ಅಲ್ಲ, ಇಡೀ ನಾಡಿನಕಾಡಿನ ಮರಗಿಡಗಳು, ಕಾಡುಪ್ರಾಣಿಪಕ್ಷಿಗಳು ನಿರಾತಂಕವನ್ನು ಅನುಭವಿಸುತ್ತಾ ಸ್ವಚ್ಛಂದವಾಗಿ ಮೆಲ್ಲಮೆಲ್ಲಗೆ ಎಲ್ಲ ಪ್ರದೇಶಗಳಲ್ಲೂ ಸಂಚರಿಸಲಾರಂಭಿಸಿದವು. ಇಷ್ಟು ದಿನ ಮನುಷ್ಯನ ಆರ್ಭಟಕ್ಕೆ ಎಲ್ಲ ಪ್ರಾಣಿಪಕ್ಷಿಗಳೂ ತತ್ತರಗೊಂಡು ಅಡಗಿಕೊಂಡು ಬಿಟ್ಟಿದ್ದವುಗಳು, ಪಾಪ ಉಸಿರಾಡಿಕೊಂಡು ಹೊರಕ್ಕೆ ಬರಲಾರಂಭಿಸಿದವು. ಈ ಮನುಷ್ಯರಿಗೆ ಏನಾಯಿತು, ಯಾಕೆ ಹೀಗೆ ಏಕಾಏಕಿ ನಾಪತ್ತೆಯಾಗಿಬಿಟ್ಟರು ಎಂಬ ಅನುಮಾನದಿಂದಲೇ, ಹೊರಗೆ ಬಂದರೆ ಎಲ್ಲಿ ಏಕಾಏಕಿ ಆಕ್ರಮಣ ಮಾಡಿ ಬೇಟೆಯಾಡಿಬಿಡುತ್ತಾರೋ ಎಂಬ ಭಯದಿಂದಲೇ, ಇಣುಕಿಣುಕಿ ನೋಡುತ್ತ ಮೆಲ್ಲಮೆಲ್ಲಗೆ ಹೊರಬರಲಾರಂಭಿಸಿದವು.

ಇಡೀ ನಾಡಿಗೆ ನಾಡೇ ಸ್ತಬ್ಧವಾಗುತ್ತಿದ್ದಂತೆ ಪ್ರಕೃತಿಯು ತನ್ನ ಮಡಿಲನ್ನು ಅರಳಿಸಲಾರಂಭಿಸಿತು. ಎಲ್ಲ ಕಡೆ ಹಸಿರು ನಳನಳಿಸಲಾರಂಭಿಸಿತು. ಹಳ್ಳಕೊಳ್ಳಗಳಿಂದ ಹರಿದುಬರುತ್ತಿದ್ದ ಕೊಳಚೆಯು ನಿರ್ಮೂಲಗೊಂಡು ನದಿಗಳು ಸ್ವಚ್ಛಂದವಾಗಿ ಹರಿಯಲಾರಂಭಿಸಿದವು. ಕುಡಿಯಲೂ ಯೋಗ್ಯವಾಗಿರದಿದ್ದ ಅದರ ನೀರು ಸ್ಫಟಿಕದಿಂದ ಸ್ವಚ್ಛಗೊಳಿಸಿದಂತೆ ಸ್ಫುಟವಾಗಿ ನೆಲದಾಳವೂ ಕಾಣಲಾರಂಭಿಸಿತು. ಉಸಿರಾಡಲೂ ಹೆಣಗಾಡುತ್ತಿದ್ದ ಕಪ್ಪೆ, ಮೀನು ಮುಂತಾದ ಜಲಚರಗಳು ನೀರೊಳಗೂ ಒಳ್ಳೆಯ ಆಮ್ಲಜನಕ ಸಿಕ್ಕ ಖುಷಿಯಲ್ಲಿ ಹೆಚ್ಚು ಕ್ರಿಯಾಶೀಲಗೊಂಡವು. ಇನ್ನು ಭೂಮಿ ಮೇಲಂತೂ ಕೇಳುವಂತೆಯೇ